# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1952 |
| ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.03.2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹಾವೇರಿ, ಗದಗ ಮತ್ತು ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಲ್ಲಿ ಕಳೆದ 2 ವರ್ಷಗಳಿಂದ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಕಳೆದ 2 ವರ್ಷಗಳಿಂದ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ಯಾವುದೇ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ.<br><br>ಆದರೆ ಧಾರವಾಡ ಜಿಲ್ಲೆಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಕೈಗೊಂಡಿರುವ |
| ಆ) | ಬಂದಿದ್ದಲ್ಲಿ, ಕಾಮಗಾರಿಗಳು ಸ್ಥಗಿತಗೊಳ್ಳಲು ಕಾರಣಗಳೇನು; (ಸಕಾರಣಗಳನ್ನು ನೀಡುವುದು) | ಈ ಕೆಳಕಂಡ ಕಾಮಗಾರಿಗಳು ಸ್ಥಗಿತಗೊಂಡಿರುತ್ತವೆ.<br><br>1. ಹುಬ್ಬಳ್ಳಿ-ಧಾರವಾಡ ಬಿ.ಆರ್.ಟಿ.ಎಸ್ ಯೋಜನೆಯಡಿಯಲ್ಲಿ ಮಂಗಸೂಳಿ-ಲಕ್ಷ್ಮೇಶ್ವರ (ರಾಜ್ಯ ಹೆದ್ದಾರಿ-73)ರ ಹುಬ್ಬಳ್ಳಿ - ಧಾರವಾಡ ಮದ್ಯ ಮಿಕ್ಸ್‌ಡ್ ಟ್ರಾಫಿಕ್ ಲೇನ್ ರಸ್ತೆಯ ಕಿ.ಮೀ. 13.480 (234.510) ರಲ್ಲಿ ಹಾಲಿ ಇರುವ ರಸ್ತೆ ಮೇಲ್ಸೇತುವೆಯ ಎರಡೂ ಬದಿಯಲ್ಲಿ ರಸ್ತೆ ಮೇಲ್ಸೇತುವೆಗಳ (ROB) ನಿರ್ಮಾಣ ಕಾಮಗಾರಿ.<br><br>2. ಧಾರವಾಡ-ಅಳ್ನಾವರ-ರಾಮನಗರ ರಸ್ತೆಯನ್ನು PPP-BOT-VGF (ಶುಲ್ಕ) ಆಧಾರದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಯಡಿಯಲ್ಲಿ ಧಾರವಾಡ ಜಿಲ್ಲೆಯ 2 ROB ಗಳ ಕಾಮಗಾರಿ.<br><br>i) <u>ROB No: 1. LC ನಂ 305 ಕೆಲಗೇರಿ ಗ್ರಾಮದ ಹತ್ತಿರ</u><br>ii) <u>ROB No: 2. LC ನಂ. 316 ಕುಂಬಾರಕೊಪ್ಪ ಗ್ರಾಮದ ಹತ್ತಿರ</u><br><br>ಕ್ರಮ ಸಂಖ್ಯೆ-1ರ ಕಾಮಗಾರಿಯ ಬಲಬದಿಯ ರಸ್ತೆ ಮೇಲ್ಸೇತುವೆ ಹಾಗೂ ಕೂಡುರಸ್ತೆ ಕಾಮಾಗಾರಿ ಪೂರ್ಣಗೊಂಡಿದೆ, ಎಡಬದಿಯ ರಸ್ತೆ ಮೇಲ್ಸೇತುವೆ ಕಟ್ಟಡ ಕಾಮಗಾರಿ ಪೂರ್ಣಗೊಂಡು, ಕೂಡು ರಸ್ತೆ ಹಾಗೂ ಇತರೆ ಕಾಮಗಾರಿಗಳು ನವಲೂರು ಗ್ರಾಮಸ್ಥರ ವಿರೋಧದಿಂದ ನವೆಂಬರ್-2018 ರಿಂದ ನವೆಂಬರ್-2021ರ ವರೆಗೆ ಸ್ಥಗಿತಗೊಂಡಿರುತ್ತದೆ. ತದನಂತರ, ನವಲೂರು ಗ್ರಾಮಸ್ಥರ ಕೆಲವು ಬೇಡಿಕೆಗಳನ್ನು ಪರಿಗಣಿಸಿ ಮೂಲ ವಿನ್ಯಾಸದಂತೆ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿದೆ. |

| | ಪ್ರಶ್ನೆಗಳು | ಉತ್ತರಗಳು |
|---|---|---|
| | | ಕ್ರಮ ಸಂಖ್ಯೆ-2 ಧಾರವಾಡ-ಅಳ್ನಾವರ-ರಾಮನಗರ ರಸ್ತೆಯನ್ನು PPP-BOT-VGF (ಶುಲ್ಕ) ಆಧಾರದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಯಡಿಯಲ್ಲಿ ಕೈಗೊಂಡಿದ್ದ ಧಾರವಾಡ ಜಿಲ್ಲೆಯ LC ನಂ. 305 ಹಾಗೂ LC ನಂ. 316 ರಲ್ಲಿನ ರಸ್ತೆ ಮೇಲ್ಸೇತುವೆ ಕಾಮಗಾರಿಗಳು ರಿಯಾಯಿತಿದಾರರ ಆರ್ಥಿಕ ಮುಗ್ಗಟ್ಟಿನಿಂದ ಹಾಗೂ ನಿರೀಕ್ಷಿತ ಮಟ್ಟದಲ್ಲಿ ಟೋಲ್ ಶುಲ್ಕ ಆಕರಣೆಯಲ್ಲಿ ಹಿನ್ನಡೆ ಉಂಟಾದ ಕಾರಣ 2013ರಿಂದ ಸ್ಥಗಿತಗೊಂಡಿರುತ್ತದೆ. ಸದರಿ ಕಾಮಗಾರಿಗಳ ಸ್ಥಗಿತದಿಂದ ಸಾರ್ವಜನಿಕರಿಗೆ ಆಗುವ ಅನಾನುಕೂಲಗಳನ್ನು ತಪ್ಪಿಸಲು ಆಗಸ್ಟ್-2018 ರಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನಿರ್ಣಯಿಸಿದಂತೆ ರೇಲ್ವೇ ಇಲಾಖೆಯ ಸಹಭಾಗಿತ್ವದಲ್ಲಿ 50:50 ಅನುದಾನ ಹಂಚಿಕೆಯಲ್ಲಿ ಎರಡೂ ಮೇಲ್ಸೇತುವೆಗಳ ಬಾಕಿ ಕಾಮಗಾರಿಗಳನ್ನು ಕೈಗೊಳ್ಳುವ ಅಂದಾಜು ಪತ್ರಿಕೆಗಳಿಗೆ ತಾಂತ್ರಿಕ ಅನುಮೋದನೆಯನ್ನು ದಿನಾಂಕ: 07.03.2022 ರಂದು ರೇಲ್ವೇ ಇಲಾಖೆಗೆ ನೀಡಲಾಗಿದ್ದು, ಕಾಮಗಾರಿಗಳನ್ನು ಪ್ರಾರಂಭಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ |
| ಇ) | ರಾಜ್ಯದಲ್ಲಿರುವ ಗ್ರಾಮಾಂತರ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿರುವ ಗ್ರಾಮೀಣ ರಸ್ತೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತಿದ್ದು, ಸದರಿ ಇಲಾಖೆಯು ಈ ಕೆಳಗಿನಂತೆ ವರದಿಸಿರುತ್ತದೆ.<br><br>ಗ್ರಾಮೀಣ ಪ್ರದೇಶದ ಕೆಲ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಪ್ರಸಕ್ತ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054, 3054 ಲಮ್‌ಸಮ್, 3054 ಲಿಂಕ್ ಡ್ಯಾಕ್ಯೂಮೆಂಟ್, 3054 ಟಾಸ್ಕ್‌ಫೋರ್ಸ್, 5054-ಮಳೆ ಪರಿಹಾರ, ಪಿಎಂಜಿಎಸ್‌ವೈ, ಪಿಎಂಜಿಎಸ್‌ವೈ ನಿರ್ವಹಣೆ, ಎನ್‌ಜಿಎನ್‌ಆರ್‌ವೈ, ನಬಾರ್ಡ್ ಯೋಜನೆಗಳಡಿ ಲಭ್ಯವಿರುವ ಅನುದಾನದಡಿ ಅಗತ್ಯವಿರುವ ರಸ್ತೆಗಳನ್ನು ದುರಸ್ತಿಪಡಿಸಲಾಗುತ್ತಿದೆ.<br><br>ಮುಂದುವರೆದು, ಬಾಕಿ ಇರುವ ರಸ್ತೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಆರ್ಥಿಕ ಇಲಾಖೆಯು ಒದಗಿಸಿರುವ ಅನುದಾನದ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ಅನುಷ್ಠಾನಗೊಳಿಸಬೇಕಿದೆ. |
| ಈ) | ಹಾಗಿದ್ದಲ್ಲಿ, ಎಂದಿನಿಂದ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | |

ಲೋಇ 32 ಸಿಕ್ಯೂಎನ್ 2022(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು